ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನೇವಿ-1/ಪ್ರದಸ/84/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು, ದಿನಾಂಕ: 24/02/2023

# ಆದೇಶ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ:
1. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ:ಇ(2)56-87/2021-22/ಪಿಎಸ್‌ಸಿ, ದಿನಾಂಕ:20.06.2022.
2. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನ ದಿನಾಂಕ:17.02.2023.

******

ಕಾಲೇಜು ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕರ ಉಳಿಕೆ ಮೂಲ ವೃಂದದ ಹುದ್ದೆಗಳಿಗೆ ಉಲ್ಲೇಖ-(01) ರಂತೆ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆಯಾಗಿರುವ 123 ಅಭ್ಯರ್ಥಿಗಳಲ್ಲಿ 07 ಅಭ್ಯರ್ಥಿಗಳ ವಿದ್ಯಾರ್ಹತೆ, ಮೀಸಲಾತಿ ಸಂಬಂಧಿತ ಪ್ರಮಾಣ ಪತ್ರಗಳ ನೈಜತೆ ವರದಿಗಳು ಹಾಗೂ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರಗಳಿಂದ ಸ್ವೀಕೃತವಾಗಿರುತ್ತವೆ. ಸದರಿ ಪ್ರಮಾಣ ಪತ್ರಗಳು ಹಾಗೂ ವರದಿಗಳು ಕ್ರಮಬದ್ಧವಾಗಿರುವ ಹಿನ್ನೆಲೆಯಲ್ಲಿ, ಸಂಬಂಧಿಸಿದ ಅಭ್ಯರ್ಥಿಗಳಿಗೆ ಉಲ್ಲೇಖ-(02) ರಲ್ಲಿ ಸ್ಥಳ ಆಯ್ಕೆ ಕೌನ್ಸಲಿಂಗ್ ನಡೆಸಲಾಗಿದ್ದು, ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ಕಾಲಂ-6 ರಲ್ಲಿ ತಿಳಿಸಿರುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಅದರನ್ವಯ ಸ್ಥಳ ಆಯ್ಕೆ ಮಾಡಿಕೊಂಡಿರುವ ಕಾಲೇಜುಗಳಲ್ಲಿ ಖಾಲಿ ಇರುವ **ಪ್ರಥಮ ದರ್ಜೆ ಸಹಾಯಕರ** ಹುದ್ದೆಯ ಎದುರಾಗಿ **ವೇತನ ಶ್ರೇಣಿ: ರೂ.27650-650-29600-750-32600-850-36000-950-39800-1100-46400-1250-52650ರಲ್ಲಿ** ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸ್ಥಳ ನಿಯುಕ್ತಿಗೊಳಿಸಿ ನೇಮಕಾತಿ ನೀಡಲಾಗಿದೆ.

| ಕ್ರ. ಸಂ | ಕೆ.ಪಿ.ಎಸ್.ಸಿ ಕ್ರ.ಸಂ | ಹೆಸರು (ಶ್ರೀ/ಶ್ರೀಮತಿ/ಕು) | ಜನ್ಮ ದಿನಾಂಕ | ಆಯ್ಕೆ ಹೊಂದಿದ ಮೀಸಲಾತಿ | ಕೌನ್ಸಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಕಛೇರಿ/ಕಾಲೇಜು |
|---|---|---|---|---|---|
| 1 | 2 | 3 | 4 | 5 | 6 |
| 1 | 1 | ರವಿಕುಮಾರ ಎನ್ ಆರ್ | 20-05-1990 | GM/3B/RL | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ. |
| 2 | 30 | ಗುರುರಾಜ್ | 05-12-1992 | 2A | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಸಿಂಧನೂರು, ರಾಯಚೂರು ಜಿಲ್ಲೆ. |
| 3 | 54 | ಶರಣಬಸವ | 05-09-1992 | GM/2A/PDP | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವಿಹಾಳ, ರಾಯಚೂರು ಜಿಲ್ಲೆ. |
| 4 | 94 | ಸ್ಫೂರ್ತಿರಾಣಿ ಎ | 31-07-1995 | 3B/W | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬ್ಯಾಡಗಿ, ಹಾವೇರಿ ಜಿಲ್ಲೆ. |
| 5 | 106 | ಜಬೀನಾ ಬೇಗಂ | 11-01-1986 | 2B/W | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಾಮನಗರ, ಕೊಪ್ಪಳ ಜಿಲ್ಲೆ. |
| 6 | 117 | ದಿನೇಶ ಕುಮಾರ ಎನ್ | 31-05-1983 | 3B/XMP | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾನಗಲ್, ಹಾವೇರಿ ಜಿಲ್ಲೆ. |
| 7 | 121 | ಶ್ರೀನಿವಾಸರಾಜೇ ಅರಸು ಬಿ ಎಸ್ | 01-05-1979 | 2A/XMP | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೇರು, ಚಾಮರಾಜನಗರ ಜಿಲ್ಲೆ. |

**ಷರತ್ತುಗಳು:**

1. ಇದು ಸ್ಪರ್ಧಾತ್ಮಕ ಪರೀಕ್ಷೆಯ ಆಧಾರದ ಮೇಲೆ ಮಾಡಿರುವ ನೇರ ನೇಮಕಾತಿಯಾಗಿರುವುದರಿಂದ, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ 5ರ ಅನುಸಾರ ಕರ್ನಾಟಕ ಲೋಕಸೇವಾ ಆಯೋಗವು ಪ್ರಕಟಿಸಿರುವ ಆಯ್ಕೆ ಪಟ್ಟಿಯಲ್ಲಿನ ಜ್ಯೇಷ್ಠತೆಯು ಅಂತಿಮವಾಗಿರುತ್ತದೆ. ಯಾವುದೇ ಅಭ್ಯರ್ಥಿಯು

ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನಾಧರಿಸಿ ಜ್ಯೇಷ್ಠತೆಯನ್ನು ಕ್ಲೇಮು ಮಾಡುವ ಹಕ್ಕುಳ್ಳವನಾಗಿರುವುದಿಲ್ಲ.

2. ಮೇಲೆ ತಿಳಿಸಿರುವ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಸ್ಥಳ ನಿಯುಕ್ತಿ ಆದೇಶವನ್ನು ಡೌನ್‌ಲೋಡ್ ಮಾಡಿಕೊಂಡು ಆದೇಶವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜಿನ ಅಧಿಕಾರಿ/ ಪ್ರಾಂಶುಪಾಲರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು. ತಪ್ಪಿದಲ್ಲಿ ಅಭ್ಯರ್ಥಿಗಳ ನೇಮಕಾತಿ ಆದೇಶವು ತಂತಾನೇ ರದ್ದಾಗುತ್ತದೆ.
3. ಅಭ್ಯರ್ಥಿಗಳು ಸ್ಥಳನಿಯುಕ್ತಿಗೊಳಿಸಿದ ಕಛೇರಿ/ಕಾಲೇಜಿನ ಅಧಿಕಾರಿ/ಪ್ರಾಂಶುಪಾಲರ ಸಮಕ್ಷಮದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ತಮ್ಮ ವಿದ್ಯಾರ್ಹತೆ ಹಾಗೂ ಆಯ್ಕೆ ಹೊಂದಿದ ಮೀಸಲಾತಿಗಳಿಗೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು.
4. ಸದರಿ ಅಭ್ಯರ್ಥಿಯನ್ನು ನೇರ ನೇಮಕಾತಿ ನಿಯಮಗಳ ನಿಬಂಧನೆಗೊಳಪಟ್ಟಿರುವರೆಂಬ ಷರತ್ತಿನ ಮೇಲೆ ನೇಮಕ ಮಾಡಲಾಗಿದೆ. 1977ರ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) ನಿಯಮಗಳ 5ನೇ ನಿಯಮದ ಪ್ರಕಾರ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಸೇವಾಪೂರ್ವ ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ (ಪ್ರೊಬೇಷನರಿ ಪೀರಿಯಡ್). ಈ ಸೇವಾ ಪೂರ್ವ ಅವಧಿಯಲ್ಲಿ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕದ್ದು.
5. ಎರಡು ವರ್ಷಗಳ ಸೇವಾ ಪೂರ್ವ ಅವಧಿಯು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಈ ಕಛೇರಿಯಿಂದ ಘೋಷಿಸಲ್ಪಡದ ಹೊರತು ಸೇವಾ ಪೂರ್ವ ಅವಧಿಯ ನಂತರದ ವಾರ್ಷಿಕ ವೇತನ ಬಡ್ತಿಯನ್ನು ಸದರಿಯವರಿಗೆ ಮಂಜೂರು ಮಾಡುವಂತಿಲ್ಲ.
6. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:43:ಸೇವನೆ:2008, ದಿನಾಂಕ:07.03.2012ರಲ್ಲಿ ಜಾರಿಗೊಳಿಸಿರುವ "ಕರ್ನಾಟಕ_ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012" ಹಾಗೂ ಸದರಿ ನಿಯಮಗಳಿಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ.
7. ದಿನಾಂಕ:31-03-2006ರ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ (ವಿಶೇಷ) 04 ಪಿಇಟಿ 2005ರ ಪ್ರಕಾರ ದಿನಾಂಕ:01-04-2006ರ ನಂತರ ನೇಮಕಾತಿ ಹೊಂದಿದವರಿಗೆ ನಿಯಮಾನುಸಾರ ನೂತನ ಪಿಂಚಣಿ ಯೋಜನೆ ಅನ್ವಯಿಸುವುದು.
8. ಕರ್ತವ್ಯಕ್ಕೆ ಹಾಜರಾಗಲು ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಾಗಿರುವುದಿಲ್ಲ.
9. ಮೇಲೆ ತಿಳಿಸಿರುವ ಅಭ್ಯರ್ಥಿಯ ನೇಮಕಾತಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿ ಹಾಗೂ ದಾಖಲಾತಿಗಳು ನಕಲಿ ಅಥವಾ ತಪ್ಪು ಎಂದು ಕಂಡು ಬಂದಲ್ಲಿ ಸದರಿ ಅಭ್ಯರ್ಥಿಯ ನೇಮಕಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಕೂಡಲೇ ರದ್ದುಪಡಿಸಲಾಗುವುದು.

**ಆಯುಕ್ತರು**
**ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ,**

1. ಮೇಲ್ಕಂಡ ಅಭ್ಯರ್ಥಿಗಳಿಗೆ-ಅಗತ್ಯ ಕ್ರಮಕ್ಕಾಗಿ.
2. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-(ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.)
4. ಕಛೇರಿ ಪ್ರತಿ.

**ಆಂತರಿಕ:**

1. ಮ್ಯಾನೇಜರ್/ಅಧೀಕ್ಷಕರು, ವರ್ಗಾವಣೆ/ನಿಯೋಜನೆ ವಿಭಾಗ, ಸೇವಾ ವಿಭಾಗ, ಯೋಜನಾ ಹಾಗೂ ಆಯವ್ಯಯ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಮ್ಯಾನೇಜರ್/ಅಧೀಕ್ಷಕರು, ಬಡ್ತಿ ಮತ್ತು ಸ್ಥಾನೀಕರಣ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಸದರಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ಸದರಿಯವರುಗಳ ಹೆಸರನ್ನು ಜೇಷ್ಠತಾ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.
3. ಕಛೇರಿ ಪ್ರತಿ.